# <u>ಮಾಹಿತಿ ಹಕ್ಕು ಕಾಯ್ದೆ ಸಹಾಯಕ ನಿಯಂತ್ರಕರು (ಹಣಕಾಸು) ಕಛೇರಿ</u>

ಮಾಹಿತಿ ಕಾಯ್ದೆ-2005 ಸೆಕ್ಷನ್ 4ರ ಅನ್ವಯ ಪ್ರಕಟಿಸಿದ್ದು

1. **ಸಹಾಯಕ ನಿಯಂತ್ರಕರು (ಹಣಕಾಸು), ಬೊಮ್ಮನಹಳ್ಳಿ ವಲಯ ವಿಭಾಗದ ಕೆಲಸಗಳು ಹಾಗೂ ಕರ್ತವ್ಯಗಳು** :-

ಅ) ಕಛೇರಿ ಹೆಸರು : ಸಹಾಯಕ ನಿಯಂತ್ರಕರು (ಹಣಕಾಸು) ರವರ ಕಛೇರಿ,
ಬೊಮ್ಮನಹಳ್ಳಿ ವಲಯ, ಬೇಗೂರು ರಸ್ತೆ,
ಬೆಂಗಳೂರು – 68.

ಆ) ರಚನೆ :-

ಸಹಾಯಕ ನಿಯಂತ್ರಕರು (ಹಣಕಾಸು)

ಲೆಕ್ಕ ಪರಿಶೋಧನಾದಿಕಾರಿ

ಅಕೌಂಟೆಂಟ್

ಇ) ಕಾರ್ಯಗಳು ಮತ್ತು ಕರ್ತವ್ಯಗಳು :

ಬೊಮ್ಮನಹಳ್ಳಿ ವಲಯದ ಎಲ್ಲಾ ಶಾಖಾ ವಿಭಾಗಗಳ ಮತ್ತು ಉಪ ವಿಭಾಗಗಳ ಅಧಿಕಾರಿ/ನೌಕರರ ವೇತನ ಬಿಲ್ಲುಗಳನ್ನು ಸ್ವೀಕರಿಸಿ ಪಾವತಿಸುವುದು, ವಲಯದ ಎಲ್ಲಾ ವಿಭಾಗಗಳ ದೂರವಾಣಿ ವೆಚ್ಚ, ವಿದ್ಯು ತ್ ವೆಚ್ಚ, ಕಟ್ಟಡ ಬಾಡಿಗೆ, ಲೇಖನ ಸಾಮಗ್ರಿ ಖರೀದಿ, ಮುದ್ರಣ, ವಾಹನಗಳ ಇಂಧನ ಮತ್ತು ರಿಪೇರಿ ಮುಂತಾದ ಆಡಳಿತಾತ್ಮಕ ವೆಚ್ಚಗಳ ಬಿಲ್ಲುಗಳನ್ನು ಸ್ವೀಕರಿಸಿ ಪರಿಶೀಲಿಸಿ ಪಾವತಿಸುವುದು. ವಲಯದ ಎಲ್ಲಾ ವಿಭಾಗದ ಹಾಗೂ ಉಪ ವಿಭಾಗಗಳ ನಡುವೆ ಸಮನ್ವಯ ಸಾಧಿಸುವುದು. ಅಪರ ಆಯುಕ್ತರು/ಜಂಟಿ ಆಯುಕ್ತರು ಮತ್ತು ಉಪ ಆಯುಕ್ತರು ಸೂಚಿಸಿರುವ ಇತರ ಕಾರ್ಯಗಳನ್ನು ನಿರ್ವಹಿಸುವುದು ಇವೇ ಮೊದಲಾದವು.

2. **ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಿಗಳು ಮತ್ತು ಕರ್ತವ್ಯಗಳು** :

| ಕ್ರಮ ಸಂಖ್ಯೆ | ಹುದ್ದೆಗಳು | ಅಧಿಕಾರ ಮತ್ತು ಕರ್ತವ್ಯಗಳು |
|---|---|---|
| 01 | ಸಹಾಯಕ ನಿಯಂತ್ರಕರು (ಹಣಕಾಸು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ಸಹಾಯಕ ನಿಯಂತ್ರಕರು (ಹಣಕಾಸು) ಲೆಕ್ಕ ಶಾಖೆಯ ಮುಖ್ಯಸ್ಥರಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಾನ್ಯ ಆಯುಕ್ತರು, ಮುಖ್ಯ ಲೆಕ್ಕಾಧಿಕಾರಿಗಳು ಮತ್ತು ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯರವರ ಅಧೀನದಲ್ಲಿ ಕಾರ್ಯನಿರ್ವಹಿಸುವುದು. ಬೊಮ್ಮನಹಳ್ಳಿ ವಲಯದ ಅಧಿಕಾರಿ ನೌಕರರ ವೇತನ ಪಾವತಿಗೆ ಸಂಬಂದಿಸಿದಂತೆ ಹಾಗೂ ಆಡಳಿತಾತ್ಮಕ ವೆಚ್ಚಗಳ ಪಾವತಿಗೆ ಸಂಬಂದಿಸಿದಂತೆ ಪಾವತಿ ಅಧಿಕಾರವನ್ನು ಹೊಂದಿರುತ್ತಾರೆ. ಮಾಸಿಕ ಲೆಕ್ಕ ಪತ್ರಗಳಿಗೆ ಸಂಬಂದಿಸಿದಂತೆ ಪತ್ರಿ ತಿಂಗಳು ಕೇಂದ್ರಕಛೇರಿಗೆ ನಿಗದಿತ ದಿನಾಂಕದಂದು ಮಾಹಿತಿ FBAS ಗೆ ಸಲ್ಲಿಸುವುದು. ವಲಯದ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಅನುಮೋದನಾ ಸಮಿತಿಯ ಸದಸ್ಯರಾಗಿರುತ್ತಾರೆ. ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯರವರಿಗೆ ಆರ್ಥಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸುವುದು. |
| 02 | ಲೆಕ್ಕ ಪರಿಶೋಧನಾದಿಕಾರಿ | ಸಹಾಯಕ ನಿಯಂತ್ರಕರು (ಹಣಕಾಸು) ಕಛೇರಿಯಲ್ಲಿ ಕಛೇರಿ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುವುದು, ವೇತನ ಬಿಲ್ಲುಗಳು ಮತ್ತು ಆಡಳಿತಾತ್ಮಕ ವೆಚ್ಚಗಳ ಬಿಲ್ಲುಗಳನ್ನು ಪರಿಶೀಲಿಸಿ ಸಹಾಯಕ ನಿಯಂತ್ರಕರಿಗೆ ಮಂಡಿಸುವುದು. ಸಹಾಯಕ |

| | | |
|---|---|---|
| | | ನಿಯಂತ್ರಕರಿಗೆ ಆರ್ಥಿಕ ಹಾಗೂ ನಿಯಮ ಸಲಹೆ ಗಾರರಾಗಿ ಕಾರ್ಯನಿರ್ವಹಿಸುವುದು. ಹಣ ಭರವಸೆ ಪತ್ರ, ಉಪಯುಕ್ತತಾ ಪತ್ರ, ಲೆಕ್ಕ ಪತ್ರಗಳನ್ನು ಪ್ರತಿ ತಿಂಗಳು ತಯಾರಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು. ಹಾಗೂ ಆಡಿಟ್ ವರದಿಗೆ ಅನುಸರಣಾವರದಿಯನ್ನು ಸಲ್ಲಿಸುವುದು. |
| 03 | ಅಕೌಂಟೆಂಟ್ | ಬೊಮ್ಮನಹಳ್ಳಿ ವಲಯದ ವಿವಿಧ ವಿಭಾಗಗಳಿಂದ ಸ್ವೀಕರಿಸುವ ಆಡಳಿತಾತ್ಮಕ ವೆಚ್ಚಗಳ ಬಿಲ್ಲುಗಳನ್ನು ಪರಿಶೀಲನೆ ಮಾಡಿ ಲೆಕ್ಕ ಪರಿಶೋದನಾದಿಕಾರಿ ಯವರ ಮೂಲಕ ಸಹಾಯಕ ನಿಯಂತ್ರಕರಿಗೆ ಸಲ್ಲಿಸುವುದು ನಗದು ಪುಸ್ತಕ ನಿರ್ವಹಣೆ, ಬ್ಯಾಂಕ್ ಜಮೆಗಳು ಮಾಸಿಕ ಲೆಕ್ಕ ಪತ್ರಗಳನ್ನು ಸಿದ್ದಪಡಿಸುವುದು, ಲೆಕ್ಕ ಪತ್ರ ಸಮನ್ವಯ ಮತ್ತು ವಲಯ ವೇತನ ಬಿಲ್ಲುಗಳನ್ನು ಸ್ವೀಕರಿಸುವುದು ವೇತನ ಬಿಲ್ಲುಗಳ ಪರಿಶೀಲನೆ ಮತ್ತು ವೇತನ ನಗದು ಪುಸ್ತಕ ನಿರ್ವಹಣೆ ಮತ್ತು ಕಛೇರಿಯ ಇನ್ನಿತರೆ ಕೆಲಸಗಳು. |
| 04 | ನಾಲ್ಕನೇ ದರ್ಜೆಯ ನೌಕರರು-1 | ಕಡತ/ಟಪಾಲು ಗಳನ್ನು ಒಂದು ಮೇಜಿನಿಂದ ಮತ್ತೊಂದು ಮೇಜಿಗೆ ಮತ್ತು ಸಂಬಂದಪಟ್ಟವರಿಗೆ ಕೊಡುವುದು. |

**3. ಕಾರ್ಯನಿರ್ವಹಿಸುವಲ್ಲಿ ಅನುಸರಿಸಬೇಕಾದ ಮಾನದಂಡಗಳು:-**

ಕೆ.ಸಿ.ಎಸ್.ಆರ್. ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ , ಸಾದಿಲ್ವಾರು ವೆಚ್ಚಗಳ ಕೈಪಿಡಿ, ಪಾಲಿಕೆಯ ಆಯವ್ಯಯ ಕೈಪಿಡಿ , ಪಾರದರ್ಶಕತೆ ಕಾಯಿದೆ ಮತ್ತು ಅನ್ವಯವಾಗುವ ಇನ್ನಿತರ ನಿಯಮಾವಳಿಗಳಂತೆ ಕಾರ್ಯನಿರ್ವಹಿಸುವುದು.

**4. ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಯಮನಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು:-**

ಕೆ.ಎಂ.ಸಿ ಕಾಯ್ದೆ, ಕೆ.ಸಿ.ಎಸ್. ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಸಾದಿಲ್ವಾರು ವೆಚ್ಚಗಳ ಕೈಪಿಡಿ, ಆಯವ್ಯಯ ಕೈಪಿಡಿ, ಪಾರದರ್ಶಕತೆಯ ಕಾಯಿದೆ ಮತ್ತು ಅನ್ವಯವಾಗುವ ಇನ್ನಿತರೆ ನಿಯಮಾವಳಿಗಳಂತೆ ಕಾರ್ಯನಿರ್ವಹಿಸುವುದು.

**5. ಇಲಾಖೆ ಹೊಂದಿರುವ ದಸ್ತಾವೇಜುಗಳ ಪಟ್ಟಿ:-**

1. ಹಾಜರಾತಿ ಪುಸ್ತಕ
2. ನಗದು ಪುಸ್ತಕ
3. ಬಿಲ್ ವಹಿ
4. ಸ್ಟಾಕ್ ಪುಸ್ತಕ
5. ಎಲ್. ಒ. ಸಿ ಬಿಲ್ ರಿಜಿಸ್ಟರ್
6. ಬಿ.ಆರ್. ರಿಜಿಸ್ಟರ್
7. ಎಫ್. ಎಸ್.ಡಿ ಮತ್ತು ಇಎಂಡಿ ವಹಿ
8. ಎಂಪಿಡಬ್ಲೂಎ
9. ಎಲ್.ಒ.ಸಿ ರಿಜಿಸ್ಟರ್

**6. ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂದಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತಹ ಯಾವುದೇ ವ್ಯವಸ್ಥೆಯ ವಿವರಗಳು:-**

ಯಾವುದು ಇರುವುದಿಲ್ಲ.

**7. ಮಂಡಳಿಗಳು , ಪರಿಷತ್ತುಗಳು, ಸಮಿತಿಗಳು ಅಥವಾ ಇತರೆ ಕಾಯಕಗಳು ಮತ್ತು ಅದರ ಬಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರೆ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡುವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿಯನ್ನು**:-

ಈ ಕಛೇರಿಯಲ್ಲಿ ನಡೆಯುವ ಎಲ್ಲಾ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುವುದಿಲ್ಲ.

**8. ಮಾಹಿತಿ ಕೇಂದ್ರದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶಿಕೆ** :-

| ಕ್ರಮ ಸಂಖ್ಯೆ | ಹೆಸರು ಮತ್ತು ಹುದ್ದೆ | ಕಛೇರಿ ವಿಳಾಸ | ದೂರವಾಣಿ |
|---|---|---|---|
| 01 | ಮಂಜುನಾಥ ಸ್ವಾಮಿ ಸಹಾಯಕ ನಿಯಂತ್ರಕರು (ಹಣಕಾಸು) | ಸಹಾಯಕ ನಿಯಂತ್ರಕರು (ಹಣಕಾಸು) ರವರ ಕಛೇರಿ ಬೊಮ್ಮನಹಳ್ಳಿ ವಲಯ ಕಛೇರಿ ಬೇಗೂರು ರಸ್ತೆ ಬೆಂಗಳೂರು – 560068. | 080-25735389 |
| 02 | ಸೋಮಸುಂದರಪ್ಪ ಲೆಕ್ಕಪರಿಶೋಧನಾದಿಕಾರಿ | ಸಹಾಯಕ ನಿಯಂತ್ರಕರು (ಹಣಕಾಸು) ರವರ ಕಛೇರಿ ಬೊಮ್ಮನಹಳ್ಳಿ ವಲಯ ಕಛೇರಿ ಬೇಗೂರು ರಸ್ತೆ ಬೆಂಗಳೂರು – 560068. | 080-25735389 |
| 03 | ದಯಾನಂದ ಅಕೌಂಟೆಂಟ್ | ಸಹಾಯಕ ನಿಯಂತ್ರಕರು (ಹಣಕಾಸು) ರವರ ಕಛೇರಿ ಬೊಮ್ಮನಹಳ್ಳಿ ವಲಯ ಕಛೇರಿ ಬೇಗೂರು ರಸ್ತೆ ಬೆಂಗಳೂರು – 560068. | 080-25735389 |

**9. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನ ವಿವರ** :-

| ಕ್ರಮ ಸಂಖ್ಯೆ | ಹೆಸರು ಮತ್ತು ಹುದ್ದೆ | ವೇತನ ಶ್ರೇಣಿ | ಮೂಲ ವೇತನ |
|---|---|---|---|
| 01 | ಮಂಜುನಾಥ ಸ್ವಾಮಿ ಸಹಾಯಕ ನಿಯಂತ್ರಕರು (ಹ) | 14050-25050 | 15200 |
| 02 | ಸೋಮಸುಂದರಪ್ಪ ಲೆಕ್ಕ ಪರಿಶೋಧನಾದಿಕಾರಿ | 14050-25050 | 15600 |
| 03 | ದಯಾನಂದ ಅಕೌಂಟೆಂಟ್ | 8400-14800 | 8400 |

**10. 2009-10ನೇ ಯಾವ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗದಿ ಪಡಿಸಲಾದ ಅನುದಾನ ವಿವರಗಳು** :-

ನಿರ್ದಿಷ್ಟವಾಗಿ ಈ ಕಛೇರಿಗೆ ಅನುದಾನ ಇರುವುದಿಲ್ಲ.

**11. ಹಂಚಿಕೆ ಮಾಡಲಾದ ಮೊಬಲಗನ್ನೊಳಗೋಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು** :-

ಈ ರೀತಿಯ ಕಾರ್ಯಕ್ರಮಗಳು ಲೆಕ್ಕ ಶಾಖೆಯಲ್ಲಿ ಇರುವುದಿಲ್ಲ.

12. **ಅದು ನೀಡಿರುವ ರಿಯಾಯಿತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು** :-

ಯಾವುದು ಇರುವುದಿಲ್ಲ.

13. **ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು** :-

ಯಾವುದು ಇರುವುದಿಲ್ಲ.

14. **ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು** :-

ಈ ಭಾಗದಲ್ಲಿ ಯಾವುದೇ ಗ್ರಂಥಾಲಯ ಅಥವಾ ವಾಚನಾಲಯ ಇರುವುದಿಲ್ಲ.

15. **ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳು** :-

ಅಧಿಕಾರಿಯ ಹೆಸರು - ಶ್ರೀ ಮಂಜುನಾಥ ಸ್ವಾಮಿ

ಪದನಾಮ - ಸಹಾಯಕ ನಿಯಂತ್ರಕರು (ಹ)

16. **ನಿಯವಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರಗೆ ಪರಿಷ್ಕರಿಸತಕ್ಕದ್ದು** :-

ಮಾನ್ಯ ಆಯುಕ್ತರು ಮತ್ತು ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರ ನಿರ್ದೇಶನ ಮತ್ತು ಮಾರ್ಗಸೂಚಿಯಂತೆ ಪರಿಷ್ಕರಿಸಲಾಗುವುದು.

ಸಹಾಯಕ ನಿಯಂತ್ರಕರು (ಹಣಕಾಸು),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೊಮ್ಮನಹಳ್ಳಿ ವಲಯ,
ಬೆಂಗಳೂರು – 560068.